## <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>
**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲೂ- | 02 |
| ಪಿಡಬ್ಲೂ- | 03 |

| | |
|---|---|
| ಹೆಸರು | ಮಂಜುನಾಥ |
| ತಂದೆ | ನಿಜಗುಣಪ್ಪ |
| ವಯಸ್ಸು | 31 ವರ್ಷ |
| ಕೆಲಸ | ಕೂಲಿ |
| ವಾಸಸ್ಥಳ | ಕೊಪ್ಪಳ |

**<u>ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಸುಮಾರು 4 ವರ್ಷದ ಹಿಂದೆ ನಾನು ಕೊಪ್ಪಳ ತಹಶೀಲ್ದಾರ ಆಫೀಸ್ ಗೆ ಪಹಣಿ ಪತ್ರಿಕೆ ತರಲು ಹೋದಾಗ ಅಲ್ಲಿ ಪೊಲೀಸರು ಈಗ ತೋರಿಸಿದ ಪಂಚನಾಮೆ ಮೇಲೆ ಸಹಿ ಪಡೆದಿರುತ್ತಾರೆ. ಸದರಿ ಸಹಿ ನೋಡಿ ಗುರುತಿಸಿದ್ದು, ಸದರ ಪಂಚನಾಮೆಯನ್ನು ನಿಪಿ 10 ಎಂದು, ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ಯಾವ ಕಾರಣಕ್ಕೆ ಪಂಚನಾಮೆ ಮಾಡಿದರು ಗೊತ್ತಿಲ್ಲ. ನನ್ನೊಂದಿಗೆ ಯಾರಿದ್ದರೂ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿರಿಯ ಸಹಾಯಕ ಸರಕಾರಿ ಅಭಿಯೋಜಕರು ವಿನಂತಿಸಿದ್ದರಿಂದ ಆಲಿಸಿ ಪರಿಶೀಲಿಸಿ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು ಃ ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿಃ- 03-04-2020 ರಂದು ತಹಶೀಲ್ದಾರ ಕಾರ್ಯಾಲಯದ ಪಹಣಿ ಪತ್ರಿಕೆ ಕೊಡುವ ಪಹಣಿಯಲ್ಲಿ ಫಿರ್ಯಾದಿದಾರ ಪ್ರಭಾಕರ್ ಭಟ್ಟ ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಹಮಿಬ್ ಸಮಕ್ಷಮ ಮದ್ಯಾಹ್ನ 3 ರಿಂದ 4 ಗಂಟೆ ಮದ್ಯೆ ಪಂಚನಾಮೆ ಮಾಡಿದರು ಎಂದರೆ ಸರಿ. ಆಗ ನನ್ನ ಸಹಿ ಪಡೆದರು ಎಂದರೆ ಸರಿ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ</u>**

ಪಂಚನಾಮೆ ಮಾಡಿದ ಸ್ಥಳದ ಚಕ್ಕಬಂದಿ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**